ವಿಶೇಷ ಅನುದಾನವಾಗಿ ರೂ. 1.00 ಲಕ್ಷ ಮೀಸಲಾಗಿಟ್ಟಿರುವುದಲ್ಲದೆ ವಿವಿಧ ಯೋಜನೆಗಳಲ್ಲೂ ಸಹ ಅನುದಾನ ಲಭ್ಯವಿರುತ್ತದೆ. ಅಧಿಕ ಅನುದಾನ ಬೇಕಾದಲ್ಲಿ ಅವಶ್ಯಕತೆಗನುಗುಣವಾಗಿ ಕೇಂದ್ರ ಕಚೇರಿಯಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಈ ವ್ಯವಸ್ಥೆಯಿಂದ ರೋಗ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ.

ಅಗರಬತ್ತಿ ಅಂಡ್ ಆದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ

4696 (5432) : ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಗರಬತ್ತಿ ವರ್ಕ್ಸ ಅಂಡ್ ಆದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತವು ಸ್ಥಾಪಿತವಾಗಿ 20 ವರ್ಷ ಕಳೆದಿದ್ದರೂ ಯಾವುದೇ ನಿವೇಶನ ಸದಸ್ಯರುಗಳಿಗೆ ಹಂಚಿಕೆ ಮಾಡದಿದ್ದರೂ ಈವರೆಗೆ ಮುಂದುವರೆಸಲು ಕಾರಣವೇನು?

ಆ) ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ 31576:1998 ಮತ್ತು 316101 ಮತ್ತು 31602:98ರ ದಿನಾಂಕ: 16.7.1999ರ ಆದೇಶದಲ್ಲಿ 3 ತಿಂಗಳೊಳಗಾಗಿ ಸಂಘವನ್ನು ಸಮಾಪನೆ ಮಾಡಲು ಆದೇಶಿಸಿದ್ದರೂ ಸಹ ಅದಕ್ಕೆ ವ್ಯತಿರಿಕ್ತವಾಗಿ ಮುಂದುವರೆಸಲು ಯಾರು ಕಾರಣ?

ಇ) ಸಂಘದ ಹೆಸರಿನಲ್ಲಿ ಪದಾಧಿಕಾರಿಗಳು ಅವ್ಯವಹಾರ ನಡೆಸಿದ್ದರೂ ಅವರ ಮೇಲೆ ಕಾನೂನು ಕ್ರಮ ಜರುಗಿಸದಿರಲು ಕಾರಣರಾರು?

ಈ) ಈ ಸಂಘವನ್ನು ಇಲ್ಲಿಯವರೆಗೆ ಮುಂದುವರೆಸಿರುವುದರಿಂದ ಸರ್ಕಾರಕ್ಕೆ ಆದ ನಷ್ಟವೆಷ್ಟು: ಈ ಸಂಘವನ್ನು ಈಗಲಾದರೂ ಸಮಾಪನೆಗೊಳಿಸಲು ಕ್ರಮ ಜರುಗಿಸುವರೆ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಅಗರಬತ್ತಿ ವರ್ಕರ್ಸ್ ಅಂಡ್ ಅದರ್ಸ್ ಗೃಹ ನಿರ್ಮಾಣ ಸಹಕಾರ ಸಂಘವು ನೋಂದಣಿಯಾದಾಗಿನಿಂದ ತನ್ನ ಸದಸ್ಯರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. ಆದರೆ ಈ ಸಂಘವು ನಿವೇಶನ ಹಂಚಿಕೆ ಮಾಡುವ ದೃಷ್ಟಿಯಿಂದ, ಬೆಂಗಳೂರು ಉತ್ತರ ತಾಲ್ಲೂಕು, ಚಿಕ್ಕಬೆಟ್ಟಹಳ್ಳಿ ಗ್ರಾಮದಲ್ಲಿ 4.16 1/2 ಎಕರೆ ಜಮೀನು ಖರೀದಿಸಿದ್ದು, ಜಮೀನಿನ ಬಗ್ಗೆ ತಕರಾರುಗಳು ಉದ್ಭವಿಸಿದ್ದು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ದಾವೆ ಸಂಖ್ಯೆ: 5540:90 ಓ ಎಸ್ 3341:92 ಗಳಲ್ಲಿ ದಿನಂಕ: 11.4.2000 ರಂದು ಸಂಘದ ಪರ ತೀರ್ಮಾನವಾಗಿದ್ದು ಈ ಆದೇಶವನ್ನು ಪ್ರಶ್ನಿಸಿ ಎದುರು ಪಕ್ಷದವರು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಆರ್.ಎಫ್.ಎ.ಎನ್. ಅರ್ಜಿ ಸಂಖ್ಯೆ:523:2001 ರಂತೆ ಅಪೀಲು ಹೂಡಿದ್ದು ವಜ್ಞಚಾರಣೆ ಹಂತದಲ್ಲಿರುತ್ತದೆ, ಈ ಜಮೀನು ಸಂಘದ ಪರವಾಗಿ ತೀರ್ಮಾನವಾದಲ್ಲಿ ಬಡಾವಣೆ ನಿರ್ಮಿಸುವ ಮತ್ತು ಸದಸ್ಯರಿಗೆ ನಿವೇಶನ ಹಂಚುವ ಕ್ರಮಕ್ಕಾಗಿ ಸಂಘವು ಮುಂದುವರಿಯಬಹುದಾಗಿದೆ. ಆದರೂ ಈ ಸಂಘವು ತನ್ನ ಉದ್ದೇಶ ಈಡೇರಿಸದೇ ಇದ್ದ ಕಾರಣ ದಿನಾಂಕ:26.11.97 ರಂದು ಸಮಾಪನಗೊಳಿಸಲಾಗಿತ್ತು, ಆದರೆ ನ್ಯಾಯಾಲಯದ ಆದೇಶದಂತೆ ದಿನಾಂಕ: 7.1.2000 ರಂದು ಪುನ:ಚೇತನಗೊಳಿಸಲಾಗಿದ್ದು ಸಂಘವು ಇಲ್ಲಿಯವರೆಗೆ ಮುಂದುವರೆಸಿದೆ.

ಆ) ಈ ಸಂಘದ ಸಮಾಪನಾ ಆದೇಶದ ವಿರುದ್ಧ ಸಂಘದ ಆಡಳಿತ ಮಂಡಳಿಯವರು ಗೌರವ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ : 31576:98ರ ಪ್ರಕಾರ ನ್ಯಾಯಾಲಯವು ದಿನಾಂಕ: 9.8.1999 ರಂದು ತೀರ್ಮ ನೀಡಿ ಈ ತೀರ್ಪಿನಲ್ಲಿ ಸಂಘವು ನೀಡಿರುವ

ಸಾಕ್ಷಿ ಪುರಾವೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಸಮಾಪನೆ ಮಾಡಿರುವುದನ್ನು ತೀವ್ರವಾಗಿ ಆಕ್ಷೇಪಿಸಿ ಸಮಾಪನಾ ಆದೇಶ ಹಾಗೂ ಅಫೀಲು ಆದೇಶಗಳನ್ನು ರದ್ದುಪಡಿಸಿ 3 ತಿಂಗಳೊಳಗಾಗಿ ಅರ್ಜಿದಾರರಿಂದ ಲಿಖಿತ ಹಾಗೂ ಮೌಖಿಕ ಅಹವಾಲುಗಳನ್ನು ಸ್ವೀಕರಿಸಿ. ಅಗತ್ಯವಿದ್ದಲ್ಲಿ ದಿನನಿತ್ಯ ಮತ್ತು ಪಿ ಟ್ ಆಪ್ ಟರ್ನ್ ವಿಚಾರಣೆ ನಡೆಸಿ ಸಂಘದ ಸಮಾಪನಾ ಪ್ರಕ್ರಿಯೆಯನ್ನು ಮುಕ್ತಾಯ ಮಾಡಲು ಆದೇಶಿಸಿದ್ದು ವಿಚಾರಣೆ ನಡೆಸಿದ ನಂತರ ಸಂಘದ ಅಹವಾಲುಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 27 (3) ರನ್ವಯ ಆದೇಶ ಹೊರಡಿಸಿರುವುದರಿಂದ ಸಂಘವನ್ನು ಮುಂದುವರಿಸಲಾಗಿದೆ.

ಇ) ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ಖಾಸಗಿಯಾಗಿ ಬಡಾವಣೆ ನಿರ್ಮಿಸಿ ಅವ್ಯವಹಾರ ನಡೆಸಿರುವುದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 59ರ ಕಲಂ65ರನ್ವಯ ನಡೆಸಿದ ವರದಿಯಿಂದ ಕಂಡು ಬಂದಿದ್ದು ಸಂಘವು ಬಡಾವಣೆ ನಿರ್ಮಿಸಲಿರುವ ಜಮೀನು ನ್ಯಾಯಾಲಯದಲ್ಲಿ ತಕರಾರಿನಲ್ಲಿರುವ ಕಾರಣ ಅಧ್ಯಕ್ಷರ ವಿರುದ್ಧ ಕ್ರಮ ಜರುಗಿಸಿಲ್ಲ. ಈ ಬಗ್ಗೆ ಪರಿಶೀಲನೆ ಕ್ರಮ ಜರುಗಿಸಲಾಗುವುದು.

ಈ) ಈ ಸಂಘವನ್ನು ಮುಂದುವರೆಸಿರುವುದರಿಂದ ಸರ್ಕಾರಕ್ಕೆ ಯಾವುದೇ ನಷ್ಟವಾಗಿಲ್ಲ. ಹಾಲೆ ಈ ಸಂಘದ ಬಗ್ಗೆ ಇರುವ ದೂರುಗಳ ಬಗ್ಗೆ ಪರಿವೀಕ್ಷಣೆ ನಡೆಸಿದ್ದು ಸಂಘದ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಸಮಾಪನೆ ಗೊಳಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ.

ಸಹಕಾರಿ ಸಂಘಗಳಿಗೆ ಚುನಾವಣೆ

4697 (5407) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ತಾಲ್ಲೂಕು ಮಟ್ಟದ ಎಷ್ಟು ಸಹಕಾರಿ ಸಂಘಗಳು ದಿನಾಂಕ:31.3.2003 ಅಂತ್ಯಕ್ಕೆ ಚುನಾವಣೆಯನ್ನು ನಡೆಸಬೇಕಾಗಿತ್ತು: ಎಷ್ಟು ಸಂಘಗಳ ಚುನಾವಣೆಯನ್ನು ಪೂರ್ಣಗೊಳಿಸಲಾಗಿದೆ?

ಆ) ಬೆಂಗಳೂರು ಜಿಲ್ಲೆಗಳಲ್ಲಿ ಎಷ್ಟು ಸಂಘಗಳು (ತಾಲ್ಲೂಕು ಮಟ್ಟ ಚುನಾವಣೆಯನ್ನು ನಡೆಸಿರುವುದಿಲ್ಲ: ಚುನಾವಣೆ ಎಷ್ಟು ವರ್ಷಗಳಿಂದ ಈ ಸಂಘಗಳಿಗೆ ನಡೆದಿರುವುದಿಲ್ಲ, ಚುನಾವಣೆಯನ್ನು ನಡೆಸಲು ಶಾಸನ ಬದ್ಧವಾಗಿ ನಿಗಧಿಪಡಿಸಿರುವ ಅವಧಿ ಎಷ್ಟು: ಚುನಾವಣೆಯನ್ನು ನಡೆಸದಿರಲು ಕಾರಣವೇನು?

ಇ) ಚುನಾವಣೆಯನ್ನು ನಡೆಸಲು ಅಧಿಕಾರಿಗಳು ವಿಫಲವಾಗಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ದಿನಾಂಕ: 31.3.2003 ರ ಅಂತ್ಯಕ್ಕೆ 215 ತಾಲ್ಲೂಕು ಮಟ್ಟದ ಸಹಕಾರ ಸಂಘಗಳು ಚುನಾವಣೆ ನಡೆಸಬೇಕಾಗಿತ್ತು. ಈ ಪೈಕಿ 202 ಸಹಕಾರ ಸಂಘಗಳು ಚುನಾವಣೆಯನ್ನು ಪೂರ್ಣಗೊಳಿಸಿರುತ್ತದೆ.

ಆ) ಬೆಂಗಳೂರು ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದ ಮೂರು ಸಹಕಾರ ಸಂಘಗಳು ಚುನಾಣವಣೆಗಳನ್ನು ನಡೆಸಿರುವುದಿಲ್ಲ. ಅವುಗಳು:–

1. ಹತ್ತಿ ಮತ್ತು ರೇಷ್ಮೆ ಕೈಮಗ್ಗದ ಮಾರಾಟ ಸಹಕಾರ ಸಂಘ ನಿ, ಹಳೆ ಗುಡ್ಡದಹಳ್ಳಿ ಬೆಂಗಳೂರು